‘ಯಾಕೆ ಬೇಡ...? ಇಷ್ಟು ದಿನ ನನ್ನ ಬಿಟ್ಟಿರುವುದು ಕಷ್ಟವೆನ್ನುತ್ತಿದ್ದವರಿಗೆ ಈಗ ಏನಾಯಿತು...?

ನನ್ನ ಮರೆಯಲ್ಲಿ ಏನು ಆಟ ಆಡ್ತಿದೀರಿ ನೀವು? ಈ ಗಂಡಸರೆಲ್ಲ ಇಷ್ಟೇ. ಬರೀ ತೆವಲು ತೀರಿಸಿಕೊಳ್ಳಲಷ್ಟೇ ಹೆಣ್ಣುಗಳು ಬೇಕು. ಈಗ ನನ್ನ ಮೇಲಿನ ಆಸಕ್ತಿ ಕಮ್ಮಿಯಾಯಿತು. ಅದಿಕ್ಕೇ ನಾನು ಮನೇಲಿದ್ರೆ ನಿಮ್ಮ ಮೇಲೆ ನಿಗಾ ಇಡ್ತೀನಿ ಅಂತ ತಾನೇ? ನನಗೆ ಈಗ ಎಲ್ಲಾ ಅರ್ಥವಾಗುತ್ತಿದೆ. ನಿಮ್ಮನ್ನು ಸಭ್ಯರು ಅಂತ ನಂಬಿದ್ದೆ. ನೀವು ಆಫೀಸಿನ ಕೆಲಸದ ಮೇಲೆ ಟೂರ್ ಎಂದಾಗಲೆಲ್ಲಾ ನಿಜವಿರಬಹುದು ಎಂದು ನಂಬಿದ್ದೆ. ಆದರೆ ಈಗ ಎಲ್ಲಾ ಸ್ಪಷ್ಟವಾಗುತ್ತಿದೆ. ಇದರ ಹಿಂದೆ ನಿಮ್ಮ ಆಟಗಳೆಲ್ಲಾ ಬೇರೆಯೇ ಇತ್ತು ಅಂತ. ಸರಿ ಬಿಡಿ. ನಿಮಗೆ ಬೇಡವಾದರೆ ನಾನು ಬರುವುದಿಲ್ಲ. ನೀವು ಒಂಟಿಯಾಗಿರಿ. ಹಾಯಾಗಿರಿ. ನಿಮ್ಮ ಆಟಗಳೆಲ್ಲಾ ಆಡಿ. ಅಷ್ಟಕ್ಕೂ ನಾವಾದರೂ ಏನು ಮಾಡಲು ಸಾಧ್ಯ? ನಿಮ್ಮ ಹಂಗಿನಲ್ಲಿರುವಾಗ. ನೀವು ಮಾಡಿದ್ದೆಲ್ಲಾ ಅಸಹಾಯಕತೆಯಿಂದ ನೋಡಬಹುದಷ್ಟೇ. ವಿರೋಧಿಸಲು ನಮಗೆ ಶಕ್ತಿ ಎಲ್ಲಿದೆ? ಬೇಡವೆಂದು ಬಿಸಾಡಿದರೆ ನಾನೆಲ್ಲಿಗೆ ಹೋಗಬೇಕು?’

ನಿವೇದಿತಾಳ ಪ್ರಲಾಪ ನಿರರ್ಗಳವಾಗಿ ಸಾಗುತ್ತಲೇ ಇದ್ದರೆ ಅವನು ದಿಗ್ಮೂಢನಾಗಿ ಕುಳಿತಿದ್ದ. ಇವಳ ಯೋಚನಾಲಹರಿ ಎಲ್ಲಿಂದ ಎಲ್ಲಿಗೆ ಹೋಗುತ್ತಿದೆ? ತಾನು ನೋಡಿದ ವಿಚಾರವಂತ ನಿವಿ ಇವಳಲ್ಲ. ಇವಳಿಗೇನಾಗಿದೆ? ಎಷ್ಟು ಅಪ್ರಬುದ್ಧಳಾಗಿ, ಏನೇನೋ ಕ್ಷುಲ್ಲಕವಾಗಿ ಮಾತನಾಡುತ್ತಿದ್ದಾಳೆ. ಯಾವ ಭಯ ಆತಂಕ ಇವಳನ್ನು ಕಂಗೆಡಿಸಿದೆ. ಇವಳ ಹೃದಯದಲ್ಲಿ ಏಕೆ ಈ ರೀತಿಯ ಕರಿಮೋಡಗಳು ಹೆಪ್ಪುಗಟ್ಟಿದೆ? ಅದನ್ನು ಕರಗಿಸಿ ಹನಿಸದೇ ಹೋದರೆ ಇವಳು ತನ್ನ ಕೈ ಬಿಟ್ಟು ಹೋಗುತ್ತಾಳೆ. ಈಗ ಇದು ತನ್ನ ಪರೀಕ್ಷಾ ಕಾಲ. ಸಂಯಮದಿಂದ ವರ್ತಿಸದೇ ಹೋದರೆ ಪರಿಸ್ಥಿತಿ ಹದಗೆಡುತ್ತದೆ ಎನಿಸಿತು.

ಹೊರಟು ನಿಂತವಳನ್ನು ಬಿಟ್ಟು ಹೋಗಲೂ ಆಗದೆ, ಕರೆದೊಯ್ಯಲೂ ಆಗದೆ ಇಬ್ಬದಿಯಲ್ಲಿ ಸಿಲುಕಿದ.

‘ನನಗೀಗ ಬೇರೆ ಕೆಲಸ ಇದೆ. ನಾಳೆ ಬಂದು ಕರ್ಕೊಂಡು ಹೋಗ್ತೀನಿ...’ ಎಂದವನೇ ಅವಳ ಉತ್ತರಕ್ಕೆ ಕಾಯದೇ ಎದ್ದು ಹೊರಟ.

ನಿವೇದಿತಾ ಕರೆಯುತ್ತಾ ಅವನ ಹಿಂಬಾಲಿಸಿ ಬಂದರೂ ಅವನು ತಿರುಗಿ ನೋಡಲಿಲ್ಲ. ಇದನ್ನು ಹಾಲ್‌ನಲ್ಲಿ ಕುಳಿತು ನೋಡುತ್ತಿದ್ದ ಕೇಶವರಿಗೂ, ವೀಣಾರಿಗೂ ಸ್ವಲ್ಪ ಬೇಸರವೇ ಆಯಿತು. ನಿವೇದಿತಾಳ ಮುಖದಲ್ಲಿ ಬೇಸರ ಎದ್ದು ಕಾಣುತ್ತಿತ್ತು.

‘ಅವನಿಗೆ ಏನು ಅರ್ಜೆಂಟ್ ಕೆಲಸ ಇತ್ತೋ ಏನೋ... ಹೋಗಲಿ ಬಿಡಮ್ಮಾ’ ಎಂದು ತಮ್ಮ ಮನದ ಬೇಗುದಿಯನ್ನು ಹೊರಗೆ ಪ್ರಕಟಿಸಲು ಇಚ್ಛಿಸದೇ ಅವಳ ಸಮಾಧಾನಕ್ಕೆ ನುಡಿದರು.

ಪತ್ನಿಯ ಮನೆಯಿಂದ ಹೊರಟ ಪ್ರದೀಪನ ಮನಸ್ಸು ಕದಡಿ ಹೋಗಿತ್ತು. ನೇರವಾಗಿ ಮನೆಗೆ ಬಂದವನೇ ಊಟವೂ ಮಾಡದೇ ಹಾಸಿಗೆಯ ಮೇಲುರುಳಿದ. ಏಕೋ ಮನಸ್ಸಿನ ನೆಮ್ಮದಿಯನ್ನು ಯಾರೋ ಸೂರೆ ಹೊಡೆದು ಹೋದಂತಾಗಿತ್ತು. ಎಷ್ಟೇ ಬಾರಿ ಕಣ್ಣು ಒತ್ತಿ ಮುಚ್ಚಿ ಮಲಗಲೆತ್ನಿಸಿದರೂ ಅದು ಅವನ ಹತ್ತಿರವೇ ಸುಳಿಯಲಿಲ್ಲ. ಬೇಡವೆಂದರೂ ಅಂದಿನ ಘಟನೆ ಕಣ್ಮುಂದೆ ಮರುಕಳಿಸುತ್ತಿತ್ತು. ನಿವೇದಿತಾ ನಿಧಿಯ ಮೂಗನ್ನು ಒತ್ತಿ ಹಿಡಿದ ಘಟನೆ. ಅದನ್ನು ನೆನೆನೆನೆದು ಅವನು ತಲ್ಲಣಿಸುತ್ತಿದ್ದ. ಈಗ ಅಲ್ಲಿ ಬಿಟ್ಟು ಬಂದರೂ ಮತ್ತೆ ಮತ್ತೆ ಅದು ಅಲ್ಲಿ ಪುನರಾವರ್ತನೆಯಾದರೆ! ಕೃತ್ತಿಕಾ ಹೇಳಿದ ಘಟನೆ ಹೇಗೆ ಘಟಿಸಲು ಸಾಧ್ಯ? ಒಂದು ವರ್ಷದ ಮಗು ಮಂಚದ ಕೆಳಗಿನ ಟಬ್‌ನಲ್ಲಿ ಹೋಗಿ ಮಲಗಲು ಹೇಗೆ ಸಾಧ್ಯ? ಇದೆಲ್ಲಾ ವಿಪರೀತಗಳು ಹೇಗೆ ಘಟಿಸುತ್ತಿವೆ? ಇದೆಲ್ಲಾ ಏನಾಗುತ್ತಿದೆ? ನಿಧಿಯ ಈ ಸ್ಥಿತಿಗೆ ಖಂಡಿತವಾಗಿ ನಿವೇದಿತಾಳೇ ಕಾರಣವೆಂದು ತನ್ನ ಹೃದಯ ಒತ್ತಿ ಹೇಳುತ್ತಿದೆ. ಆದರೆ ತಾನು ಬಾಯಿ ಬಿಟ್ಟು ಖಡಾಖಂಡಿತವಾಗಿ ಯಾರ ಮುಂದೆ ಹೇಳಿದರೂ ಇದನ್ನು ಯಾರಾದರೂ ನಂಬುವರೇ? ನಿವೇದಿತಾಳೂ ತಾನು ಮಾಡಿದ ಕೃತ್ಯದ ಪರಿವೆಯೇ ಇಲ್ಲದಂತೆ ವರ್ತಿಸುತ್ತಿದ್ದಾಳೆ. ಅವಳದ್ದು ಅಮಾಯಕತನದ ಸೋಗೇ ಅಥವಾ ನಿಜಕ್ಕೂ ಈ ನಿಟ್ಟಿನಲ್ಲಿ ಅವಳು ಮುಗ್ಧಳೋ, ತಾನು ಮಾಡಿದ ಕೃತ್ಯವು ಪ್ರಜ್ಞಾಪೂರ್ವಕವಾಗಿ ಮಾಡಿದ್ದು ಅಲ್ಲವೇ, ಇದನ್ನು ಸರಿಪಡಿಸುವುದು ಹೇಗೆ?

ತಾನು ನೋಡಿದ ನಿವಿ ಹೀಗಿರಲಿಲ್ಲ. ತಾನು ಯಾವುದೋ ಮದುವೆಗೆ ಹೋಗಿದ್ದಾಗ ಅಲ್ಲಿ ನಿವಿಯನ್ನು ಮೊದಲ ಬಾರಿ ನೋಡಿದ್ದೆ. ಮೆಚ್ಚಿದ್ದೆ. ಪರಿಚಿತರ ಮೂಲಕ ವಿಚಾರಿಸಿ ಅವಳ ಕೈ ಹಿಡಿಯುವ ಅಪೇಕ್ಷೆ ವ್ಯಕ್ತಪಡಿಸಿದ್ದೆ. ಅವಳ ಹೆತ್ತವರು ಸಂತೋಷವಾಗಿ ಒಪ್ಪಿಗೆ ನೀಡಿದ್ದರು. ನಿವಿ ಮುಂಚಿನಿಂದಲೂ ಮಿತಭಾಷಿ. ಅವಳ ಗಾಂಭೀರ್ಯವೇ ತನ್ನನ್ನು ಆಕರ್ಷಿಸಿತ್ತು. ತನ್ನ ಅಭಿಪ್ರಾಯಗಳನ್ನು ಎಂದೂ ಮುಕ್ತವಾಗಿ ವ್ಯಕ್ತಪಡಿಸುವುದು ಅವಳಿಗೆ ಗೊತ್ತಿಲ್ಲ. ತಾನು ಒತ್ತಿ ಕೇಳಿದರೂ ತಾನು ತಂದದ್ದನ್ನು ಸುಲಭವಾಗಿ ಒಪ್ಪಿಕೊಟ್ಟದ್ದನ್ನು ಅಲ್ಪತೃಪ್ತಳೆನ್ನುವಂತೆ ಸ್ವೀಕರಿಸುತ್ತಿದ್ದಳು.

ಅವಳಿಗೆ ತಾನು ತಂದ ವಸ್ತು ಎಲ್ಲಿ ಸಮಾಧಾನವಾಗಿಲ್ಲವೋ ಎಂದು ಅವನು ಅಳುಕಿನಿಂದ ಒತ್ತೊತ್ತಿ ಕೇಳುತ್ತಿದ್ದ.

‘ನಿನ್ಗೆ ಇಷ್ಟವಾಯಿತಾ ಹೇಳು. ಇಲ್ಲವಾದರೆ ಬದಲಿಸೋಣ’ ಎಂದು ಹತ್ತಾರು ಬಾರಿ ಅವಳ ಕಣ್ಣೊಳಗೆ ನಿರಾಕರಣೆಯ ಭಾವ ಹುಡುಕಿದರೂ ಅವನಿಗೆ ದೊರಕುತ್ತಿರಲಿಲ್ಲ.

ಪಾಲಿಗೆ ಬಂದದ್ದು ಪಂಚಾಮೃತವೆನ್ನುವಂತೆ ಮೌನವಾಗಿ ಸ್ವೀಕರಿಸುವ ಪತ್ನಿಯ ಈ ಸ್ವಭಾವ ಅವನಿಗೆ ಕೆಲವೊಮ್ಮೆ ಕಸಿವಿಸಿ ಉಂಟು ಮಾಡಿದ್ದುಂಟು. ತನ್ನನ್ನು ಈಕೆ ಮನಸ್ಪೂರ್ವಕವಾಗಿ ಇಷ್ಟ ಪಟ್ಟು ಮದುವೆ ಆಗಿದ್ದಲ್ಲವೇ? ಅವಳ ಮೌನ, ತಣ್ಣಗಿನ ಸ್ವಭಾವದ ಒಳಗೆ ಏನಾದರೂ ಅಗ್ನಿ ಪರ್ವತವಿದೆಯೇ? ಏಕೋ ಅವಳ ನಗುವಿನಲ್ಲಿ, ಮೌನದಲ್ಲಿ ಏನೋ ಕೊರಗಿದೆ ಅಥವಾ ನೋವಿದೆ ಎಂದು ಒಮ್ಮೊಮ್ಮೆ ಅನ್ನಿಸುತ್ತದೆ. ಮನಸ್ಸು ಮುಕ್ತವಾಗಿ ಅರಳಿರುವಾಗ ಗೆಲುವಿನ ನಗೆ ಬೀರುವ ಕೆಲವೇ ಕ್ಷಣಗಳ ನಂತರ ಆ ನಗು ಅವಳ ಮುಖದ ಮೇಲಿಂದ ಮರೆಯಾಗುತ್ತದೆ. ತನ್ನ ಬದುಕನ್ನು ನಿವಿ ಹಾರ್ದಿಕವಾಗಿ ಬದುಕುತ್ತಿಲ್ಲ ಎಂದು ಅನ್ನಿಸಿದ್ದು ಎಷ್ಟೋ ಬಾರಿ. ಹೆಣ್ಣು ಮಕ್ಕಳಿಗೆ ಸಹಜವಾಗಿಯೇ ಏನೇನೋ ಆಸೆಗಳಿರುತ್ತವೆ. ಉಡುಗೆ, ತೊಡುಗೆ, ಆಭರಣ, ಕಡೇ ಪಕ್ಷ ತಿನಿಸುಗಳಲ್ಲಾದರೂ ಏನೋ ಒಂದು, ನಿವೇದಿತಾಳಿಗೆ ಅದೂ ಇಲ್ಲ. ಏಕೋ ಮನೆಯ ನಾಲ್ಕು ಗೋಡೆಗಳ ನಡುವೆ ಅವಳು ತನ್ನ ಬದುಕನ್ನು ಹೊಂದಿಸಿಕೊಂಡಿದ್ದಾಳೆ ಎಂದು ಅವನಿಗೆ ಅನ್ನಿಸಿತ್ತು. ಎಷ್ಟೋ ಬಾರಿ ಅವನು ತಾನೇ ಸ್ವಲ್ಪ ಸಮಯ ಮಾಡಿಕೊಂಡು ಬೇಗ ಮನೆಗೆ ಬಂದು ಅವಳನ್ನು ಹೊರಗೆ ಕರೆದೊಯ್ಯುವ ಅಪೇಕ್ಷೆ ವ್ಯಕ್ತಪಡಿಸಿದರೂ ಅವಳು ಉದಾಸೀನ ತೋರುತ್ತಿದ್ದಳು.

‘ಅಪರೂಪಕ್ಕೆ ಮನೆಯಲ್ಲಿ ಸಮಯ ಕಳೆಯಲು ಸಿಕ್ಕಿರುವಾಗ ಏಕೆ ಹೊರಗೆ ಹೋಗುವುದು? ಹಾಯಾಗಿ ಮನೇಲಿರಿ’ ಎನ್ನುತ್ತಿದ್ದಳು. ಕ್ರಮೇಣ ಪ್ರದೀಪನೇ ಪತ್ನಿಯ ಸ್ವಭಾವಕ್ಕೆ ಹೊಂದಿಕೊಂಡಿದ್ದ. ಇಂಥ ಅಪರೂಪದ ಪತ್ನಿ ಸಿಕ್ಕಿರುವುದು ತನ್ನ ಅದೃಷ್ಟ ಎಂದು ಮನಗಂಡು, ಅದನ್ನು ಹಲವು ಬಾರಿ ಅವಳ ಮುಂದೆ ಅರುಹಿದ್ದ.

ನಿವೇದಿತಾಳಿಗೆ ತನ್ನೊಡನೆ ಮನೆಗೆ ಬರಲು ಅಪೇಕ್ಷೆ ಇದ್ದರೂ ತಾನೇ ಅದನ್ನು ತಡೆದ ಬಗ್ಗೆ ಅವನಿಗೂ ಖೇದವಿತ್ತು. ಅವಳ ನಡವಳಿಕೆಯನ್ನು ಒಮ್ಮೆ ಕಣ್ಣಾರೆ ನೋಡಿದ ಬಳಿಕ ಮತ್ತೆ ಅಂಥ ಘಟನೆ ಪುನರಾವರ್ತನೆ ಆಗಬಾರದೆನ್ನುವ ಕಾರಣಕ್ಕೆ ಅವನು ಒಂದಷ್ಟು ಪ್ರಮುಖ ನಿಲುವುಗಳನ್ನು ತಳೆಯಬೇಕಿತ್ತು. ದಿನಾ ಅವಳೇನು ಮಾಡುತ್ತಾಳೆಂದು ತನಗೆ ಅವಳ ಮುಂದೆ ಕುಳಿತು ಕಣ್ಣಾವಲಿರಲು ಸಾಧ್ಯವಿಲ್ಲದೇ ಹೋದರೂ ಈಗ ಸಿಸಿಟಿವಿಯಂಥ ಆಧುನಿಕ ಡಿಜಿಟಲ್ ವ್ಯವಸ್ಥೆ ಇರುವಾಗ ತಾನು ಎಲ್ಲಿದ್ದರೂ ಮನೆಯ ವಿದ್ಯಮಾನಗಳನ್ನು ವೀಕ್ಷಿಸಬಹುದೆಂಬ ಸಾಧ್ಯತೆ, ಅವನಿಗೆ ವರದಾನವಾಗಿ ಕಂಡಿತ್ತು. ಆದರೆ ಅವಳ ಅನುಮತಿ ಪಡೆದು ತಾನು ಅದನ್ನು ಅಳವಡಿಸಲು ಸಾಧ್ಯವೇ? ಮನೆಯ ಮಲಗುವ ಕೋಣೆಯಲ್ಲಿ ಇದನ್ನು ಅಳವಡಿಸಿದರೆ ಅಪಾರ್ಥ ಮಾಡಿಕೊಳ್ಳುವ ಸಂಭವವೇ ಹೆಚ್ಚು. ಆದರೆ ಪುಟ್ಟ ನಿಧಿಯನ್ನು ನಿವೇದಿತಾ ಬೆಡ್ ರೂಮಿನಲ್ಲೇ ಇಡೀ ದಿನ ಮಲಗಿಸುವಾಗ ಅಲ್ಲಿ ಅವಳು ಮತ್ತೊಮ್ಮೆ ಇಂಥ ಪ್ರಮಾದ ಎಸಗಿದರೆ? ನಿಗಾ ಇಡದೇ ಇರಲು ಸಾಧ್ಯವೇ ಇಲ್ಲ ಎನಿಸಿತ್ತು. ಅಲ್ಲದೇ ನಿವೇದಿತಾಳ ಸಹಚಾರಿಯಾಗಿ ಯಾವುದಾದರೂ ಒಳ್ಳೆಯ ಹೆಂಗಸನ್ನು ನೇಮಿಸಬೇಕು ಎನಿಸಿ ಅಂಕಿತಾಳಿಗೆ ಕರೆ ಮಾಡಿದ.

ತನ್ನ ಖಾಸಗಿ ಸಂಗತಿಗಳನ್ನು ಅವಳ ಮುಂದೆ ಅರುಹಲು ಅವನಿಗೆ ಇಷ್ಟವಿರಲಿಲ್ಲ. ಹಾಗಾಗಿ ನಿವೇದಿತಾ ಮತ್ತು ನಿಧಿಯ ಜೊತೆಗೆ ಇದ್ದು ನೋಡಿಕೊಳ್ಳಲು ಯಾರಾದರೂ ಸಹಾಯಕಿ ಬೇಕೆಂದಷ್ಟೇ ತಿಳಿಸಿದ. ತುರ್ತಾಗಿ ನೇಮಿಸಬೇಕೆಂದೂ ಆಜ್ಞಾಪಿಸಿದ. ನಿವೇದಿತಾಳನ್ನು ಮನೆಗೆ ಕರೆಸಿಕೊಳ್ಳುವ ಮುನ್ನ ಸಹಾಯಕಿಯ